ರಾಜ್ಯದ ಯೋಜನಾ ವೆಚ್ಚದ ಬಗ್ಗೆ

247 (485) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):–

ರಾಜ್ಯ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1992–93ರಲ್ಲಿ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಸೂಚಿಸಿರುವ ವೆಚ್ಚದ ಹಣಕ್ಕೂ ಯೋಜನಾ ಆಯೋಗವು ನಿಗದಿ ಮಾಡಿರುವ ವೆಚ್ಚದ ಹಣಕ್ಕೂ ಇರುವ ಅಂತರವೆಷ್ಟು;

ಆ) ಈ ಅಂತರಕ್ಕೆ ಕಾರಣವನ್ನು ಮತ್ತು ಇದನ್ನು ಹೋಗಲಾಡಿಸಲು ಸಾಧ್ಯವಿಲ್ಲವೆ;

ಇ) 1993–94ಕ್ಕೆ ಯೋಜನಾ ಆಯೋಗವು ವೆಚ್ಚಕ್ಕಾಗಿ ರಾಜ್ಯಕ್ಕೆ ನಿಗದಿ ಮಾಡಿರುವ ಹಣವೆಷ್ಟು;

ಈ) ಈ ರೀತಿ ಯೋಜನಾ ಆಯೋಗವು ನಿಗದಿ ಮಾಡಿರುವಷ್ಟು ವೆಚ್ಚವನ್ನು ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಸೂಚಿಸುವುದೇ ?

ಶ್ರೀ ಟಿ.ಎಂ. ಮಂಜುನಾಥ್ (ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ರಾಜ್ಯಮಂತ್ರಿಗಳು):–

ಅ) 1992–93ನೇ ಸಾಲಿನಲ್ಲಿ ರಾಜ್ಯದ ಆಯವ್ಯಯದಲ್ಲಿ ರೂ. 244ಕೋಟಿಯಷ್ಟನ್ನು ಯೋಜನಾ ಆಯೋಗವು ಒಪ್ಪಿಗೆ ಕೊಟ್ಟಿದ್ದಕ್ಕಿಂತ ಹೆಚ್ಚಾಗಿ ನಿಗದಿಪಡಿಸಲಾಗಿದೆ.

ಆ) ರಾಜ್ಯದ ಸಂಪನ್ಮೂಲದ ಕ್ರೋಢೀಕರಣದಲ್ಲಿ ಉತ್ತಮ ಫಲಿತಾಂಶವಾಗಿದ್ದುದರಿದ ಮತ್ತು ಕೆಲವು ಮುಖ್ಯ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣವನ್ನು ಒದಗಿಸುವ ಉದ್ದೇಶವು ಈ ಅಂತರಕ್ಕೆ ಕಾರಣ. ಇದನ್ನು ನಿವಾರಿಸುವ ಅವಶ್ಯಕತೆ ಇಲ್ಲ.

ಇ) ರೂ. 3025 ಕೋಟಿಗಳು.

ಈ) ಹೌದು.

ಸೋಮವಾರಪೇಟೆ ತಾಲ್ಲೂಕಿನ ಹೆಬ್ಬಾರೆಯಲ್ಲಿ ಪೋಲೀಸ್ ಔಟ್–ಪೋಸ್ಟ್

231 (557) ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ):–

ರಾಜ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸೋಮವಾರಪೇಟೆ ತಾಲ್ಲೂಕಿನ ಹೆಬ್ಬಾರೆಯಲ್ಲಿ ಒಂದು ಪೊಲೀಸ್ ಔಟ್‌ಪೋಸ್ಟ್ ಸ್ಟೇಷನ್‌ನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ರಮಾನಾಥ ರೈ (ರಾಜ್ಯ ಗೃಹ ಸಚಿವರು):–

ಅ) ಇಲ್ಲ

ಆ) ಉದ್ಭವಿಸುವುದಿಲ್ಲ